

ಡಾ.ವಿನೋದ ಛೆಬ್ಬಿ

ಹೆಣ್ಣಿನ ಮೇಲಿನ ಅತ್ಯಾಚಾರವನ್ನು ಗಂಡಾದವರು ಅನುಭವದಿಂದ ಅರ್ಥೈಸಿಕೊಳ್ಳಲು ಸಾಧ್ಯವೇ?

# 189: ನಿರ್ಭಯಾಳ ಕತೆ-ಕರುಳು

ನೀನಾಸಂ ಶಿಬಿರದ ಕಡೆಯ ದಿನ ಮಧ್ಯಾಹ್ನ ಮಾಯಾ ಕೃಷ್ಣರಾವ್ ಅವರ ನೃತ್ಯಕಾರ್ಯಕ್ರಮವಿತ್ತು. ಮಾಯಾ ರಂಗಭೂಮಿಯ ಸೃಜನಾತ್ಮಕ ನೃತ್ಯಗಾರ್ತಿ. ತಮ್ಮದೇ ಅಭಿನಯದ ಶೈಲಿಯನ್ನು ಹುಟ್ಟುಹಾಕಿದ್ದಾರೆ. ಸರಳವಾದ ಪ್ಯಾಂಟುಶರ್ಟು ತೊಟ್ಟ ಮಹಿಳೆ ಏಕಾಂಗಿಯಾಗಿ ರಂಗದ ಮೇಲೆ ಬರುತ್ತಾರೆ. ಏಕವಾದ್ಯದ ಹಿನ್ನೆಲೆಯ ಸಂಗೀತ ತೇಲಿಬರುತ್ತಿದ್ದರೆ, ಸಂಗೀತಕ್ಕೆ ತಕ್ಕಂತೆ ನಾಟ್ಯವಿರದೆ, ನಾಟ್ಯಕ್ಕೆ ತಕ್ಕಂತೆ ಸಂಗೀತ ಕುಣಿಯುವಂತೆ ಇರುತ್ತದೆ. ಅವರು ರೂಪಿಸಿಕೊಂಡಿರುವ ಶೈಲಿಯಾದರೂ ಎಂಥದ್ದು? ಪಾಶ್ಚಾತ್ಯ ಶೈಲಿಯ ನೃತ್ಯದಲ್ಲಿ ಕರುಳಿನ ಸಂಕಟ, ಕ್ರೋಧ, ದಿಟ್ಟತನ, ಹೋರಾಟ, ವಿಡಂಬನೆ ಹಾಗೂ ಹಾಸ್ಯಗಳು ಒಂದರ ನಂತರ ಇನ್ನೊಂದು ಓತಪ್ರೋತವಾಗಿ ಬರುತ್ತವೆ. ಅಸಾಂಪ್ರದಾಯಿಕ ಭಂಗಿಗಳಲ್ಲಿ ಕೆಚ್ಚು ಎದ್ದುಕಾಣುತ್ತದೆ. ಬಾಹ್ಯಸಂವೇದನೆಗಳಿಗೆ ಸ್ಪಂದಿಸುತ್ತ ತಮ್ಮ ಅಂತರಂಗದ ಸ್ವಾತಂತ್ರ್ಯದ ಬಯಕೆಯನ್ನು ಬೆರಗುಗೊಳಿಸುವಂತೆ ಅಭಿವ್ಯಕ್ತಿಗೊಳಿಸುವುದು ಅವರಿಗೆ ಕರಗತವಾಗಿದೆ.

ಆ ದಿನ ಮಾಯಾ ಅಭಿನಯಿಸಿದ ಕೃತಿಯ ಹೆಸರು 'ವಾಕ್'. ವಿಷಯವಸ್ತು ಡಿಸೆಂಬರ್ 16. 2012ರಂದು ದೆಹಲಿಯಲ್ಲಿ ನಡೆದ ನಿರ್ಭಯಾ ಮೇಲಿನ ಅತ್ಯಾಚಾರ. ಅದರ ಬಗೆಗೆ ಇಪ್ಪತ್ತು ನಿಮಿಷಗಳ ಕಾಲ ನಾನಾ ರೀತಿಗಳಲ್ಲಿ ನರ್ತಿಸುತ್ತ, ಆಗಾಗ ಸತ್ವಯುತ ಮಾತುಗಳನ್ನು ಶಕ್ತಿಯುತ ಭಾಷೆಯಲ್ಲಿ ಹೊರಹೊಮ್ಮಿಸುತ್ತ ತಮ್ಮೊಳಗಿನ ಭಾವಗಳನ್ನು ಭಂಗಿಗಳಲ್ಲಿ ಹೊರಹಾಕಿದರು. ನಂತರ ಪ್ರೇಕ್ಷಕರಿಂದ ಹಂಚಿಕೊಳ್ಳಲು ಆಹ್ವಾನ. ಏನನ್ನು ಹಂಚಿಕೊಳ್ಳಬೇಕು? ನೃತ್ಯದ ಬಗೆಗೆ ತಮ್ಮ ಅಭಿಪ್ರಾಯವನ್ನಲ್ಲ, ನೃತ್ಯವನ್ನು ವೀಕ್ಷಿಸುವಾಗ ತಮಗಾದ ಅಂತರಂಗದ ಅನುಭವದ ಬಗೆಗೆ.

ನನಗಾದ ಅನುಭವ ಹಂಚಿಕೊಂಡೆ: ಸ್ವಚ್ಛಂದವಾಗಿ ಹಾರಾಡಲು ಮನಸ್ಸಾಯಿತು. ಅದರ ಬೆನ್ನಹಿಂದೆ ಭಯ, ಆತಂಕ ಕಾಡಿತು. ಭಯಕ್ಕೆ ಓಗೊಟ್ಟು ಭದ್ರವಾಗಿ ಉಳಿಯಲೋ ಅಥವಾ ಏನೇ ಆಗಲಿ ಎಂದು ಮುನ್ನುಗ್ಗಲೋ ಎಂಬ ದ್ವಂದ್ವ ಹುಟ್ಟಿ ಗೊಂದಲಕ್ಕೆ ಒಳಗಾದೆ. ಹಾಗಾದರೂ ಭಯವನ್ನು ಬಿಟ್ಟುಹಾಕಿ ಮುಂದೆ ಸಾಗಲು ನಿಂತುಕೊಂಡರೆ ನಾನಾ ದಾರಿಗಳು ಕಾಣುತ್ತಿವೆ. ಆದರೆ ಎಲ್ಲವೂ ಅಪರಿಚಿತ. ಯಾವ ಹಾದಿ ಹಿಡಿದರೆ ಎಲ್ಲಿ ಮುಟ್ಟುವೆನೋ ಎಂದು ಇನ್ನೊಂದು ಭಯ. ಆದರೂ ತಿರುಗಿ ಮರಳಲಾರೆ. ಅನಿಶ್ಚಿತ ತಾಣ ದಾಟಿ ಮುಂದೆ ಸಾಗುತ್ತೇನೆ. ನನ್ನ ಆತ್ಮಕ್ಕೆ ಬೇಕಾದ ಸ್ವಚ್ಛಂದತೆಯನ್ನೂ ಸ್ವಾತಂತ್ರ್ಯವನ್ನೂ ಹುಡುಕಿಕೊಳ್ಳುತ್ತೇನೆ.

ಇನ್ನೊಬ್ಬ ಮಹಿಳೆ ತನ್ನ ಅನುಭವವನ್ನು ಹಂಚಿಕೊಂಡಿದ್ದು ಹೀಗೆ: ಭದ್ರತೆ ಹಾಗೂ ಸಾಧ್ಯತೆ ಇವೆರಡೂ ನಮ್ಮ ಬದುಕಿನ ಆಯ್ಕೆಗಳು. ಎರಡೂ ಎರಡು ಧ್ರುವಗಳಲ್ಲಿ ಇರುವುದರಿಂದ ಎರಡರಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳಬಹುದಷ್ಟೆ. ಕತ್ತಲೆಯ ರಾತ್ರಿಯಲ್ಲಿ ತಿರುಗಾಟವು ರೋಚಕ ಅನುಭವಗಳ ಸಾಧ್ಯತೆಗಳನ್ನು ಕೊಡುತ್ತದೆ, ನಿಜ. ಆದರೆ ಅದನ್ನು ಪಡೆಯಲಿಕ್ಕಾಗಿ ಮನೆಯ ಬೆಚ್ಚಗಿನ ಭದ್ರತೆಯನ್ನು ಬಿಡಬೇಕಾಗುತ್ತದೆ. ಅಪಾಯಕ್ಕೆ ತುತ್ತಾಗುವ ಭಯವನ್ನು ಎದುರಿಸಬೇಕಾಗುತ್ತದೆ.

ಇದಕ್ಕೂ ನಿರ್ಭಯಾಳಿಗೂ ಏನು ಸಂಬಂಧ? ನಿರ್ಭಯಾಳ ಪ್ರಕರಣದಿಂದ ದೇಶವೆಲ್ಲ ಕಂಪಿಸಿತು. ಅತ್ಯಾಚಾರಿಗಳಿಗೆ ಗಲ್ಲುಶಿಕ್ಷೆಯಾಗಿದೆ. ಲೈಂಗಿಕ ಅತ್ಯಾಚಾರಿಗಳ ತ್ವರಿತ ವಿಚಾರಣೆಗೆ ಕಾನೂನಿನಲ್ಲಿ ಸುಧಾರಣೆ ತರಲಾಗಿದೆ. ಶಿಕ್ಷೆಯ ತೀವ್ರತೆ ಕೂಡ ಹೆಚ್ಚಾಗಿದೆ. ಆದರೂ ಅತ್ಯಾಚಾರಗಳು ನಡೆಯುತ್ತಲೇ ಇವೆ. ಇಲ್ಲಿ ನನಗೊಂದು ಪ್ರಶ್ನೆ ಕಾಡತೊಡಗಿದೆ: ದುಷ್ಟ ಗಂಡಸರನ್ನು ಬಿಡಿ, ಒಬ್ಬ ಸುಸ್ವಭಾವಿ ಗಂಡು ಹೆಣ್ಣಿನ ಅತ್ಯಾಚಾರಕ್ಕೆ ಹೇಗೆ ಸ್ಪಂದಿಸಬಲ್ಲ? ಕರುಣೆ, ಸಹಾನುಭೂತಿ, ಸಹತಾಪ ಇತ್ಯಾದಿ? ನೆರವು, ಸಹಾಯ, ಪ್ರೋತ್ಸಾಹ ಇತ್ಯಾದಿ? ಇದೆಲ್ಲ ಸರಿ, ಆದರೆ ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ನೋವನ್ನು ತನ್ನ ಶರೀರಕ್ಕೆ ಮನಸ್ಸಿಗೆ ಆತ್ಮಕ್ಕೆ ಆಗುವ ನೋವು ಎಂದು ಏಕೀಕರಿಸುತ್ತ ಅನುಭವಿಸಲು ಒಂದು ಗಂಡಿಗೆ ಸಾಧ್ಯವಿದೆಯೆ? ಅದಕ್ಕೆ ಹೇಗೆ ರೂಪುಗೊಡಬೇಕು ಎಂದು ಯೋಚಿಸುತ್ತಿರುವಾಗಲೇ ಒಂದು ದೃಶ್ಯ ಕಲ್ಪನೆಗೆ ಬಂತು:

ನೀವೊಬ್ಬರು ತರುಣರು. ಕಟ್ಟುಮಸ್ತಾದ ಶರೀರವನ್ನು ಬೆಳೆಸಿಕೊಂಡಿದ್ದೀರಿ. ಸ್ವಚ್ಛಂದವಾಗಿ ನಲಿಯುತ್ತ ಬದುಕುತ್ತಿದ್ದೀರಿ. ಒಂದು ರಾತ್ರಿ ಕ್ಲಬ್‌ಗೆ ಚಿಕ್ಕ ಉಡುಪು ಧರಿಸಿ ಹೋಗುತ್ತೀರಿ. ಅಲ್ಲಿ ಕುಣಿದು ತಿಂದು ಹೊರಬರುವಾಗ ಗಂಟೆ ಒಂದಾಗಿರುತ್ತದೆ. ನಿಮ್ಮ ಸೂರಿಲ್ಲದ ಸ್ಪೋರ್ಟ್ಸ್ ಕಾರಿನಲ್ಲಿ ಕುಳಿತುಕೊಳ್ಳುತ್ತೀರಿ. ಆಗ ನಾಲ್ವರು ಲಲನೆಯರು ನಿಮ್ಮನ್ನು ಸುತ್ತುವರಿಯುತ್ತಾರೆ. ನಿಮ್ಮ ಶರೀರವನ್ನು ಮೆಚ್ಚಿ ಅದರೊಂದಿಗೆ ಸುಖಪಡಬೇಕೆಂದು ಬಯಸುತ್ತ ಹಾವಭಾವಗಳಿಂದ ವ್ಯಕ್ತಪಡಿಸುತ್ತಾರೆ. ಹೇಗೆ ಅದಕ್ಕೆ ಸ್ಪಂದಿಸಬೇಕು ಎಂದು ಯೋಚಿಸುತ್ತಿರುವಾಗಲೇ ನಾಲ್ವರೂ ನಿಮ್ಮ ಮೇಲೆ ಮುಗಿಬೀಳುತ್ತಾರೆ. ನಿಮ್ಮ ಬಟ್ಟೆಗಳನ್ನು ಹರಿದುಹಾಕುತ್ತಾರೆ. ನಿಮ್ಮ ಪ್ರತಿಭಟನೆ ಕೆಲಸ ಕೊಡುವುದಿಲ್ಲ. ನಿಮ್ಮನ್ನು ನೆಲಕ್ಕೆ ಕಚ್ಚಿ ಹಿಡಿಯಲಾಗಿದೆ. ಒಬ್ಬಳು ನಿಮ್ಮ ವೃಷಣ ಬೀಜಗಳ ಜೊತೆಗೆ ಆಟವಾಡುತ್ತ ಇದು ನನಗೆ ಬೇಕು ಎಂದು ಬಾಯಲ್ಲಿ ಇಟ್ಟುಕೊಂಡು ಚೀಪಲು ಶುರುಮಾಡುತ್ತಾಳೆ. ನಿಮಗೆ ನರಕ ಯಾತನೆ. ಇನ್ನೊಬ್ಬಳು ನಿಮ್ಮ ಜನನಾಂಗವು ತಯಾರಾಗಿಲ್ಲವೆಂದು ಕೋಪಿಸಿಕೊಂಡು ಅದರೊಳಗೆ ಪೆನ್ಸಿಲ್‌ನಂಥದ್ದು ಏನನ್ನೋ ತುರುಕುತ್ತಾಳೆ. ನೋವಿನಿಂದ ಕಿರುಚಿಕೊಳ್ಳಬೇಕೆಂದರೆ ಇನ್ನೊಬ್ಬಳು ತನ್ನ ಬಾಯಿಯಿಂದ ನಿಮ್ಮ ಬಾಯಿಯನ್ನು ಕಚ್ಚಿ ಮುಚ್ಚಿದ್ದಾಳೆ. ನೀವು ಹೋರಾಟ ಬಿಟ್ಟುಕೊಟ್ಟು ಶರಣಾಗುತ್ತ, ಈ ಶರೀರ ನನ್ನದಲ್ಲವೆಂದು ಮರೆತು ಮೂರ್ಛೆಹೋಗುತ್ತೀರಿ.

ಮಾರನೆಯ ದಿನ ಆಸ್ಪತ್ರೆಯಲ್ಲಿ ಕಣ್ಣುತೆರೆದಾಗ ನಿಮ್ಮ ತೊಡೆಸಂದು ಹೊಲಿಗೆಗಳ ತಿಪ್ಪೆಯಾಗಿರುತ್ತದೆ. ಎಲ್ಲವೂ ಕಾಲಕ್ರಮೇಣ ಮಾಯುವುದು ಎಂದು ವೈದ್ಯರು ಭರವಸೆ ಕೊಡುತ್ತಾರೆ. ಆದರೆ ನಿಮ್ಮ ಮನಸ್ಸಿನ ಗಾಯ ಮಾಯುವುದೇ? ನಿಮ್ಮ ಭೀಭತ್ಸ ಅನುಭವ ಮಾಸುವುದೆ? ಪುರುಷತ್ವವನ್ನು ಭವಿಷ್ಯದಲ್ಲಿ ಸವಿಯಬಹುದು ಎಂದು ಭರವಸೆ ಮೂಡಬಲ್ಲುದೆ?

ನಿರ್ಭಯಾ ಅತ್ಯಾಚಾರಕ್ಕೆ ಒಳಗಾಗಿ ಸತ್ತಳು. ಸತ್ತಳೆಂದು ಬದುಕಿದಳು. ಒಂದುವೇಳೆ ಬದುಕಿದ್ದರೆ ಬದುಕಲು ಅಸಾಧ್ಯವಾಗಿ ಸತ್ತೇಹೋಗುತ್ತಿದ್ದಳು. ನೀವು ಕಲ್ಪನೆಯಲ್ಲಿ ಅನುಭವಿಸಿದ ನೋವನ್ನು ಆಕೆ ವಾಸ್ತವವಾಗಿ ಅನುಭವಿಸುತ್ತ ದಿನವೂ ಸಾಯುತ್ತಿದ್ದಳು.

ಹೆಣ್ಣಾದುದಕ್ಕೆ ಹೆಣ್ಣು ಹೀಗೆ ನೋವು ಅನುಭವಿಸುವುದು ಅನಿವಾರ್ಯವಾದರೆ, ಗಂಡಸರು ಸಂವೇದನಾಶೀಲರಾಗಿ ಇಲ್ಲದಿರುವುದು ಅನಿವಾರ್ಯವಾದರೆ, ಕಾನೂನಿನ ಅಂಕುಶಕ್ಕೆ ಜನರು ಸೊಪ್ಪುಹಾಕದಿದ್ದರೆ ಹೆಂಗಸರು ಏನು ಮಾಡಬಲ್ಲರು ಎನ್ನುವುದೇ ಜ್ವಲಂತ ಪ್ರಶ್ನೆ. ಇದನ್ನು ಸವಾಲು ಎಂದು ಸ್ವೀಕರಿಸಿ ಮಾಯಾ ಕೃಷ್ಣರಾವ್ ತಮ್ಮ ಅಭಿನಯದಲ್ಲಿ ತೋರಿಸಿದ್ದಾರೆ. ಅದರಲ್ಲಿ ಇರುವುದು ಒಂದೇ ಸಂದೇಶ: ನಿನ್ನ ಶರೀರದ ಮೇಲೆ ಎಂಥದ್ದೇ ಘಾತುಕ ಕೃತ್ಯ ನಡೆಯಲಿ, ಕೆಚ್ಚೆದೆಯಿಂದ ಹೊರಹೋಗು. ಶರೀರದ ಮೇಲಿನ ಅತ್ಯಾಚಾರದ ಭಯ ನಿನ್ನಾತ್ಮವನ್ನು ಬಲಹೀನವಾಗಿ ಮಾಡದಿರಲಿ. ಸಂಜೆಯ ಸೊಬಗನ್ನೂ ರಾತ್ರಿಯ ನಿವಾಂತತೆಯನ್ನೂ ಒಬ್ಬಳೇ ಅನುಭವಿಸುವ ಹಕ್ಕು ನಿನ್ನ ಆತ್ಮಕ್ಕಿದೆ. ಅದಕ್ಕಾಗಿ ನಿನ್ನ ಶರೀರವು ಭಯದಿಂದ ಹಿಂದೆಗೆದರೆ ಲೆಕ್ಕಿಸಬೇಡ.

'ಈ ಸಂದರ್ಭದಲ್ಲಿ ನಾನು ಭದ್ರತೆಗೆ ಮಹತ್ವ ಕೊಟ್ಟು ಮನೆಯಲ್ಲಿ ಹಾಯಾಗಿ ಕುಳಿತು ನಿಷ್ಕ್ರಿಯವಾಗಲೇ? ಅಥವಾ ದುಷ್ಟಶಕ್ತಿಗಳನ್ನು ಲೆಕ್ಕಿಸದೆ ಸಂಜೆಯ ತಿರುಗಾಟಕ್ಕೆ ಹೋಗಲೆ? ಅದಕ್ಕೆ ನನ್ನ ದಿಟ್ಟತನದ ಉತ್ತರ: ನನ್ನ ಶಾರೀರಿಕ ನೋವಿಗಿಂತಲೂ ನನ್ನ ಆತ್ಮದ ಸ್ವಾತಂತ್ರ್ಯದ ಕರೆಗೆ ಓಗೊಡುತ್ತೇನೆ.'

ಎಂಥ ಅದ್ಭುತ ಸಂದೇಶ!

ಇನ್ನುಮೇಲೆ ಹೆಂಗಸರು ತಡರಾತ್ರಿ ನಿಧಾನ ನಡಿಗೆಯಲ್ಲಿ ಮನೆಗೆ ಮರಳುತ್ತಿರುವಾಗ ಕತ್ತಲ ಬೆಳಕಿನ ಬದುಕನ್ನು ಅನ್ವೇಷಿಸುವ ಅವರ ಕೆಚ್ಚನ್ನು ಗಂಡುಹೆಣ್ಣೆನ್ನದೆ ಎಲ್ಲರೂ ಮೆಚ್ಚಲು ಕಲಿಯುತ್ತೀರಾ?

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888